# ಸೆರಗ ಬಿಡಯ್ಯ ಕೃಷ್ಣ ಕರೆಯಲು ಪೋಪೆನು

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 35
2. **Note:** A similar theme song but having different set of wordings is available. This another version is also mentioned here – " seraga biDO ranga seraga biDo " ; " ಸೆರಗ ಬಿಡೋ ರಂಗ ಸೆರಗ ಬಿಡೊ "
3. **Note:** In both these krutis the Ankita is same.
4. **Note:** This song is not available in the books of Prof. S.K. Ramachandra Rao and also in the books of Gorebala Hanumantha Rayaru.

ರಾಗ: ಮಾರ-ಧನ್ಯಾಸಿ ತಾಳ: ಆದಿ

ಸೆರಗ ಬಿಡಯ್ಯ ಕೃಷ್ಣ ಕರೆಯಲು ಪೋಪೆನು
ಕರುಗಳು ಹಸಿದಿವೆ ಕರುಣೆಗಳರಸನೆ ॥ ಪ ॥

ಕೆನೆ ಮೊಸರನೆ ಕಡೆದು ನಿನಗೀವೆ ಬೆಣ್ಣೆಯ
ಗೊನೆಯ ಬಾಳೆಯ ಹಣ್ಣ ತಿನಲು ಕೊಡುವೆ
ನೆನೆಗಡಲೆ ಕೊಬ್ಬರಿ ನಿನಗೆ ಮೆಲಲಿಕ್ಕುವೆ
ತನಯರೊಡನೆ ಆಡ ಕಳುಹುವೆ ರಂಗಯ್ಯ ॥ ೧ ॥

ಗೋವಳರೆಲ್ಲ ಬಂದು ಬಾಗಿಲೊಳಗೆ ನಿಂದು
ಗೋವುಗಳನು ಬಿಡಲು ಸಾರುತಿಹರು
ನೋವುಗೊಳಿಸಬೇಡ ಪರರ ಮಕ್ಕಳ ನೀನು
ಭಾವಜನಯ್ಯನೆ ಲಾಲಿಸೀ ನುಡಿಯನು ॥ ೨ ॥

ಶರಧಿಯ ತಡಿಯಲಿ ನೆರೆದಿಪ್ಪ ಸತಿಯರ
ಪರಿಪರಿ ವಸ್ತ್ರವ ಸೆಳೆಯಬೇಡ
ನೆರೆಮನೆ ಹೊರೆಮನೆ ಕರುಗಳ ಬಿಡಬೇಡ
ಸುರರಿಗೊಡೆಯ ನಮ್ಮ ಪುರಂದರ ವಿಠಲ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ತಾಯಿ ಯಶೋದೆ ಮಗನನ್ನು ' ಸೆರಗ ಬಿಡು, ಹಾಲನ್ನು ಕರೆಯಲು ಹೋಗುತ್ತೇನೆ ' ಎಂದು ವಿವಿಧ ರೀತಿಯಲ್ಲಿ ರಮಿಸುತ್ತಾಳೆ.

**ಭಾವಜನಯ್ಯ** = ಕಾಮನ ತಂದೆ, ಶ್ರೀ ಕೃಷ್ಣ

**ಶರಧಿ** = ನದಿ

**Classification:** Keerthane
**Ankita:** Purandara Vittala
**Location:** NA
**Category:** Krishna Leele
**Sub-Category:** Krishna, ranga, govu, gopi, makkalu, yashode, hannu, benne, mosaru, ADu, ATa, bagilu, nadi, patni, vastra, mane,
**Pravachana:** NA
**Explanation:** NA